ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU


# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magzine*


ಸಂಪುಟ 4 ಸಂಚಿಕೆ 22 ಅಕ್ಟೋಬರ್ 2019




ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿ ಹಾಗೂ ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಗಳನ್ನು ಶ್ರೀ ಪಿ.ಎಸ್. ಹಿರೇಮಠ, ಡಾ. ಸಿ. ಶಿವಕುಮಾರಸ್ವಾಮಿ, ಶ್ರೀ ನಿರುಪಾಧೀಶ ಸ್ವಾಮಿಗಳು, ಶ್ರೀ ಮಲ್ಲಿಕಾರ್ಜುನ ಎಂ. ಕೋರವಾರಕರ್‌ರವರಿಗೆ ಪ್ರದಾನ ಮಾಡಲಾಯಿತು. ಚಿತ್ರದಲ್ಲಿ ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಚಂದ್ರಕಾಂತ ಬೆಲ್ಲದ, ಪರಮಪೂಜ್ಯ ಜಗದ್ಗುರುಗಳು, ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, ಶ್ರೀ ಚಿರಂಜೀವಿ ಸಿಂಗ್, ಡಾ. ಹಂಪನಾ, ಡಾ. ಪ್ರಧಾನ್ ಗುರುದತ್ತ, ಶ್ರೀಮತಿ ಸುಶೀಲ ಸತೀಶ್ ಪ್ರಫುಲ್ಲಚಂದ್ರ, ಡಾ. ಸಿ.ಜಿ. ಬೆಟಸೂರಮಠ ಹಾಗೂ ಪ್ರೊ. ಚಂದ್ರಶೇಖರಯ್ಯನವರು




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ 'ಆರೋಗ್ಯ ಸಿರಿ' ಯೋಜನೆಗೆ ಸಚಿವರಾದ ಶ್ರೀ ವಿ. ಸೋಮಣ್ಣನವರು ಚಾಲನೆ ನೀಡಿದರು. ಚಿತ್ರದಲ್ಲಿ ಕರ್ನಲ್ ಡಾ. ಎಂ. ದಯಾನಂದ, ಡಾ. ಬಿ. ಸುರೇಶ್, ಡಾ. ಸಿ.ಜಿ. ಬೆಟಸೂರ ಮಠ, ಶ್ರೀ ಎಸ್.ಎ. ರಾಮದಾಸ್, ಡಾ. ನಾಗೇಂದ್ರಸ್ವಾಮಿ




ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಯದಲ್ಲಿ ಭಾರತೀಯ ಶರೀರಶಾಸ್ತ್ರಜ್ಞರ ಸಂಘದ ಆರನೆಯ ವಾರ್ಷಿಕ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರು ಗಳವರ ದಿವ್ಯಸಾನ್ನಿಧ್ಯದಲ್ಲಿ ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಲಾಯಿತು. ಚಿತ್ರದಲ್ಲಿ ಡಾ. ಆರ್. ರಾಜಲಕ್ಷ್ಮಿ, ಡಾ. ಎಚ್. ಬಸವನಗೌಡಪ್ಪ, ಡಾ. ಸಿ.ಜಿ. ಬೆಟಸೂರಮಠ, ಡಾ. ನರಸಿಂಗ ವರ್ಮಾ, ಡಾ. ಚಂದ್ರಶೇಖರ ಶೆಟ್ಟಿ, ಡಾ. ಬಿ. ಸುರೇಶ್, ಡಾ. ಎಸ್.ಬಿ. ದೇಶಪಾಂಡೆ, ಡಾ. ಜಿ.ಕೆ. ಪಾಲ್, ಡಾ. ಎಲ್. ರಾಜೇಶ್ವರಿಯವರು



ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ನಡೆದ ಬೆಳದಿಂಗಳ ಸಂಗೀತ - 216ರ ಕಾರ್ಯಕ್ರಮದಲ್ಲಿ (ಕರ್ನಾಟಕ ಹಿಂದೂಸ್ತಾನಿ ಜುಗಲ್‌ಬಂದಿ) ವಿದ್ವಾನ್ ಆರ್.ಕೆ. ಪದ್ಮನಾಭ್ (ವೀಣೆ), ಡಾ. ರವೀಂದ್ರ ಗುರುರಾಜ್ ಕಾಟೋಟಿ (ಹಾರ್ಮೋನಿಯಂ), ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ (ಮೃದಂಗ), ಪಂ. ಉದಯ್ ರಾಜ್ ಕರ್ಪೂರ್ (ತಬಲ)

## ಸಾಧಕರನ್ನು ಗೌರವಿಸುವುದು ಸಂತಸದ ಸಂಗತಿ

ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ದಿನಾಂಕ 26.9.2019 ರಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಏರ್ಪಡಿಸಿದ್ದ ಕೃತಿಗಳ ಲೋಕಾರ್ಪಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ವಿಜಯಪುರ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆ ಮಾಡಿದ ಸಾಧಕರನ್ನು ಹರಸಿ, ಗೌರವಿಸಿ, ಸಂತೋಷ ಪಡುವುದು ಸಂತಸದ ಸಂಗತಿ. ಲೋಕಾರ್ಪಣೆಗೊಂಡ ಕೃತಿಗಳನ್ನು ಮನೆಗೆ ತೆಗೆದುಕೊಂಡು ಹೋಗುವುದರೊಂದಿಗೆ ಅದರಲ್ಲಿರುವ ಮೌಲ್ಯಗಳು ಮನವನ್ನು ತಲುಪಲಿ ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿಗಳಾದ ಶ್ರೀ ಚಿರಂಜೀವಿ ಸಿಂಗ್‌ರವರು ಮಾತನಾಡಿ, ಮಹಾಕಾವ್ಯ ಮತ್ತು ಪುರಾಣಗಳ ವಿಷಯ ಕುರಿತು ವಿವಿಧ ಭಾಷೆಗಳಲ್ಲಿ ಅನೇಕ ಕಾದಂಬರಿಗಳು ರಚನೆಯಾಗಿವೆ. ಆದರೆ ನಮ್ಮ ಸಮಕಾಲೀನರನ್ನು ಕುರಿತು ಕಾದಂಬರಿ ರಚಿಸುವುದು ಸುಲಭದ ಮಾತಲ್ಲ. ಏಕೆಂದರೆ ಕಾದಂಬರಿಯಲ್ಲಿ ಕಲ್ಪನೆಯು ವಾಸ್ತವದ ಚೌಕಟ್ಟನ್ನು ಮೀರಬಾರದು. 'ಸುತ್ತೂರು ಸುರಧೇನು' ಕಾದಂಬರಿಯು ರಾಜೇಂದ್ರ ಶ್ರೀಗಳ ಬದುಕಿನ ಸತ್ಯದ ನಿರೂಪಣೆಯಾಗಿದೆ ಎಂದು ಹೇಳಿದರು.

ಡಾ. ಚಂದ್ರಶೇಖರಯ್ಯನವರ ಸಂಪಾದಕತ್ವದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಭಾಷಣಗಳ ಸಂಕಲನ ಕೃತಿ 'ಗ್ಲಿಂಪ್ಸೆಸ್ ಆಫ್ ದಿ ಚೆರಿಷಡ್ ವ್ಯಾಲ್ಯೂಸ್' ಮತ್ತು ಡಾ. ಪದ್ಮ ರಾಮಚಂದ್ರಶರ್ಮರವರು ಅನುವಾದಿಸಿದ 'ಸುತ್ತೂರು ಸುರಧೇನು' ಆಂಗ್ಲಭಾಷಾ ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಹಿರಿಯ ವಿದ್ವಾಂಸರಾದ ನಾಡೋಜ ಡಾ. ಹಂಪ ನಾಗರಾಜಯ್ಯರವರು, ರಾಜೇಂದ್ರ ಶ್ರೀಗಳವರ ಶಿಷ್ಯ ವಾತ್ಸಲ್ಯ, ಹೃದಯವೈಶಾಲ್ಯ ಅನುಪಮವಾದುದು. ಅವರಿಗೆ ಎಲ್ಲಾ ವಿಷಯಗಳು ಕರತಲಾಮಲಕ ವಾಗಿದ್ದವು. ಅವರ ಋಷಿಸದೃಶ ತ್ಯಾಗಜೀವನ ಸುತ್ತೂರ ಸುರಧೇನು ಕಾದಂಬರಿಯಲ್ಲಿ ಅನಾವರಣ ಗೊಂಡಿದೆ. ಮೌಲ್ಯಗಳು ನೆಲಕಚ್ಚುತ್ತಿರುವ ಇಂದಿನ ದಿನಮಾನಗಳಲ್ಲಿ ವ್ಯಕ್ತಿದ್ವೇಷ, ಪರನಿಂದನೆ ರಾರಾಜಿಸುತ್ತಿವೆ. ಇಂತಹ ಸಂದರ್ಭದಲ್ಲಿ ಪ್ರತಿಫಲಾಪೇಕ್ಷೆ ಇಲ್ಲದ, ನಾನು ಮಾಡಿದೆ ನನ್ನಿಂದಾಯಿತು ಎಂಬ ಅಹಮ್ಮಿಕೆ ಇಲ್ಲದ ವಿಶ್ವಭ್ರಾತೃತ್ವ ಮತ್ತು ಮಾನವೀಯತೆಯನ್ನು ಎತ್ತಿಹಿಡಿಯುವ 'ಗ್ಲಿಂಪ್ಸೆಸ್ ಆಫ್ ದಿ ಚೆರಿಷಡ್ ವ್ಯಾಲ್ಯೂಸ್' ಕೃತಿಯು ಹೃದಯ ಹಂಬಲಿಸುವ ಕಿರಣಗಳ ರಾಶಿ. ವಿಷಯ ವಿಸ್ತಾರ ವೈವಿಧ್ಯತೆ ಸಾದ್ಯಂತವಾಗಿ ಹರಡಿಕೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತ ಕೃತಿಗಳು ಹಾಗೂ ಪುರಸ್ಕೃತರ ಪರಿಚಯ ಮಾಡಿದ ಡಾ. ಪ್ರಧಾನ್ ಗುರುದತ್ತರವರು, ಶ್ರದ್ಧೆ, ನಿಷ್ಠೆ, ಅನುಭವ ಮತ್ತು ಸತತ ಅಧ್ಯಯನದಿಂದ ಹೊರಹೊಮ್ಮಿದ ಕೃತಿಗಳು ಸರಳವಾಗಿ ಓದಿಸಿಕೊಳ್ಳಬಲ್ಲವು ಎಂದು ಹೇಳಿದರು.

ಶ್ರೀ ನಿರುಪಾಧೀಶ ಸ್ವಾಮಿಗಳವರ 'ಸಿದ್ಧರಾಮ ವಿಲಾಸ' ಕೃತಿಗೆ 2017ನೇ ಸಾಲಿನ ಹಾಗೂ ಡಾ.

ಸಿ. ಶಿವಕುಮಾರ ಸ್ವಾಮಿಯವರ 'ವೇದಾಗಮಗಳು ಮತ್ತು ಚೆನ್ನಬಸವಣ್ಣ' ಕೃತಿಗೆ 2018ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ; ಶತಾಯುಷಿ ಶ್ರೀ ಮಲ್ಲಿಕಾರ್ಜುನ ಎಂ. ಕೋರವಾರಕರ್ ಅವರಿಗೆ 2019ನೇ ಸಾಲಿನ ವಚನ ಚಿತ್ರರಚನಾ ಪಿತಾಮಹ ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿ ಮತ್ತು ಹುಬ್ಬಳ್ಳಿಯ ಶ್ರೀ ಪಿ.ಎಸ್. ಹಿರೇಮಠರವರಿಗೆ 2019ರ ಕಲಾಗುರು ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಡಾ. ಸಿ.ಜಿ. ಬೆಟಸೂರಮಠ, ಪ್ರೊ. ಚಂದ್ರಶೇಖರಯ್ಯ, ಶ್ರೀ ಎಸ್.ಪಿ. ಮಂಜುನಾಥ್, ಪ್ರೊ. ಮೊರಬದ ಮಲ್ಲಿಕಾರ್ಜುನ, ಡಾ. ನಂದೀಶ್ ಹಂಚೆ ಉಪಸ್ಥಿತರಿದ್ದರು. □

## ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಮೈಸೂರು ದಸರಾ ಕಲಾವೈಭವ

ದಸರಾ ಮಹೋತ್ಸವದ ಪ್ರಯುಕ್ತ ರಿಂಗ್ ರಸ್ತೆಯಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ 'ಮೈಸೂರು ದಸರಾ ಕಲಾವೈಭವ' ಏರ್ಪಡಿಸಲಾಗಿತ್ತು.

ರಾಜ್ಯ ಬೃಹತ್ ಮತ್ತು ಮೆಗಾ ಕೈಗಾರಿಕಾ ನಿರ್ದೇಶನಾಲಯ, ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಯೋಗದೊಂದಿಗೆ ಏರ್ಪಡಿಸಿರುವ ಜಿಲ್ಲಾ ಮಟ್ಟದ ಗುಡಿ ಕೈಗಾರಿಕೆಗಳ ವಸ್ತುಪ್ರದರ್ಶನ ಮತ್ತು ಮಾರಾಟ 'ಮೈಸೂರು ದಸರಾ ಕಲಾವೈಭವ'ಕ್ಕೆ ಪ್ರವಾಸೋದ್ಯಮ ಸಚಿವ ಸಿ.ಟಿ. ರವಿ ಚಾಲನೆ ನೀಡಿದರು. ಸುತ್ತೂರು ಶ್ರೀಗಳ ದೂರದೃಷ್ಟಿಯ ಫಲವಾಗಿ ಅರ್ಬನ್ ಹಾತ್ ಅರ್ಥಾತ್ ನಗರ ಸಂತೆ ನಿರ್ಮಾಣವಾಗಿದೆ. ದಸರಾ ಸಂದರ್ಭದಲ್ಲಿ ಆಯೋಜಿಸಿರುವ ಮೇಳದಲ್ಲಿ ಸುಮಾರು 60ಕ್ಕೂ ಹೆಚ್ಚು ಮಳಿಗೆಗಳಲ್ಲಿ ಕರಕುಶಲ, ಗುಡಿ ಕೈಗಾರಿಕೆಗಳ ಉತ್ಪನ್ನಗಳು ಮಾರಾಟಕ್ಕಿವೆ. ಮೈಸೂರಿನ ನಿವಾಸಿಗಳು ಹಾಗೂ ದೇಶ–ವಿದೇಶದಿಂದ ದಸರೆಗೆ ಬರುವ ಪ್ರವಾಸಿಗರು ಒಮ್ಮೆ ಇಲ್ಲಿಗೆ ಭೇಟಿ ನೀಡಿದರೆ ಒಂದಾದರೂ ವಸ್ತು ಕೊಂಡರೆ ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಸಿ. ರಂಗನಾಥಯ್ಯ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಾದ ಶ್ರೀ ಡಿ.ಕೆ. ಲಿಂಗರಾಜು, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕರಾದ ಶ್ರೀ ಜನಾರ್ದನ್, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ ಯೋಜನಾಧಿಕಾರಿಗಳಾದ ಶ್ರೀ ಎಂ. ಶಿವಾನಂದಸ್ವಾಮಿ ಉಪಸ್ಥಿತರಿದ್ದರು.

**ಜೆಎಸ್‌ಎಸ್ ಸಂಸ್ಥೆಗಳಲ್ಲಿ ನಡೆಯುವ ಕಾರ್ಯಕ್ರಮದ ವರದಿಗಳು ಮತ್ತು ಛಾಯಾಚಿತ್ರಗಳನ್ನು ಜೆಎಸ್‌ಎಸ್ ಮಾಸಪತ್ರಿಕೆಯ ಈ ಇಮೇಲ್ ವಿಳಾಸಕ್ಕೆ ಕಳುಹಿಸುವುದು :**
**email:jssmasapatrike@gmail.com**

## ಜೆಎಸ್‌ಎಸ್ ಆಸ್ಪತ್ರೆಯಲ್ಲಿ 'ಆರೋಗ್ಯ ಸಿರಿ' ಯೋಜನೆಗೆ ಚಾಲನೆ

ಚಿಕಿತ್ಸೆಗೆಂದು ಬರುವ ಬಡವರ ಮೇಲಿನ ಆರ್ಥಿಕ ಹೊರೆ ತಗ್ಗಿಸಲು ಆರೋಗ್ಯ ಸಿರಿ ಯೋಜನೆ ರೂಪಿಸಲಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ತಿಳಿಸಿದರು. ದಿನಾಂಕ 19.9.2019 ರಂದು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ 'ಆರೋಗ್ಯ ಸಿರಿ' ಯೋಜನೆಗೆ ಪೂಜ್ಯರ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು.

ಖಾಯಿಲೆ ಬಂದಾಗ ಎಲ್ಲಿ ಬೇಕೋ ಅಲ್ಲಿಗೆ ಹೋಗಿ ಚಿಕಿತ್ಸೆ ಪಡೆಯುವಂತಿರಬೇಕು. ರೋಗಿಗೆ ಯಾವುದೇ ಅಡೆತಡೆ ಇರಬಾರದು. ಈ ಯೋಜನೆಯನ್ನು ಮುಂದಿನ ದಿನಗಳಲ್ಲಿ ವಿಮೆ, ಕ್ರೆಡಿಟ್ ಕಾರ್ಡ್‌ಗೆ ಜೋಡಿಸಲಾಗುವುದು. ಉಳಿದ ಖಾಸಗಿ ಆಸ್ಪತ್ರೆಗಳಿಗೂ ವಿಸ್ತರಿಸುವ ಉದ್ದೇಶವಿದೆ ಎಂದು ಪೂಜ್ಯರು ನುಡಿದರು.

ಯೋಜನೆಗೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ವಿ. ಸೋಮಣ್ಣನವರು ಜೆಎಸ್‌ಎಸ್ ಆಸ್ಪತ್ರೆಯನ್ನು ಅತ್ಯುತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿದ್ದು ಉಳಿದೆಲ್ಲಾ ಆಸ್ಪತ್ರೆಗಳಿಗೆ ಮಾದರಿಯಾಗಿದೆ. ಬಡ ರೋಗಿಗಳಿಗೆ ನೆರವಾಗಲಿರುವ ಆರೋಗ್ಯ ಸಿರಿ ಯೋಜನೆ ವಿನೂತನವಾಗಿದೆ. ಕಟ್ಟಕಡೆಯ ವ್ಯಕ್ತಿಗೂ ಆರೋಗ್ಯ ಸೇವೆ ಸಿಗಬೇಕೆಂಬ ಪೂಜ್ಯರ ಕಾಳಜಿಗೆ ಇದು ಸಾಕ್ಷಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆಸ್ಪತ್ರೆಗೆ ಬಂದ ಹಣವನ್ನು ವಾಪಸ್ ಜನರಿಗೇ ತಲುಪಿಸುವ ಹಲವಾರು ಯೋಜನೆಗಳನ್ನು ಶ್ರೀಗಳವರು ರೂಪಿಸಿದ್ದಾರೆ. ಆಸ್ಪತ್ರೆಯೊಂದಿಗೆ ಕೌಟುಂಬಿಕ ಸಂಬಂಧ ಬೆಸೆಯುತ್ತಿದ್ದಾರೆ ಎಂದು ಶಾಸಕರಾದ ಶ್ರೀ ಎಸ್.ಎ. ರಾಮದಾಸ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಕರ್ನಲ್ ಡಾ. ಎಂ. ದಯಾನಂದ, ಡಾ. ಬಸವನಗೌಡಪ್ಪ, ಡಾ. ನಾಗೇಂದ್ರಸ್ವಾಮಿಯವರು ಉಪಸ್ಥಿತರಿದ್ದರು.

## ಮಾಧ್ಯಮ ಮತ್ತು ಮಾಹಿತಿ ತಂತ್ರಜ್ಞಾನದಿಂದ ಮನೆಮಾತಾಗಿರುವ ಇಸ್ರೋ

ಮಾಧ್ಯಮ ಹಾಗೂ ಮಾಹಿತಿ ತಂತ್ರಜ್ಞಾನ ದಿಂದಾಗಿ ಇಸ್ರೋ ಇಂದು ಮನೆಮಾತಾಗಿದೆ ಎಂದು ಇಸ್ರೋದ ಇನ್ಸಾಟ್ ಮಾಜಿ ನಿರ್ದೇಶಕರಾದ ಡಾ. ರಂಗರಾಜನ್ ತಿಳಿಸಿದರು.

ನಗರದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗವು ಟೆಕಿಪ್ನ ಸಹಯೋಗದೊಂದಿಗೆ ಆಯೋಜಿಸಿದ್ದ ನ್ಯಾನೋ ಸ್ಯಾಟ್‌ಲೈಟ್ ತಂತ್ರಜ್ಞಾನ ಕುರಿತ ಐದು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈ ವರ್ಷ ಇಸ್ರೋದ ಮೊದಲ ನಿರ್ದೇಶಕರಾದ ಡಾ. ವಿಕ್ರಂ ಸಾರಾಭಾಯ್ ಅವರ ಜನ್ಮ ಶತಮಾನೋತ್ಸವ ಕೂಡ ಆಗಿದ್ದು, ಇಂತಹ ಸಂದರ್ಭದಲ್ಲಿ ದೇಶ ಬಾಹ್ಯಾಕಾಶದಲ್ಲಿ ಮಹತ್ವದ ಸಾಧನೆಗಳನ್ನು ಮಾಡುತ್ತಿರುವುದು ವಿಶೇಷ ಎಂದ

ಅವರು, ಭವಿಷ್ಯದ ನ್ಯಾನೋ ಸ್ಯಾಟಲೈಟ್‌ಗಳ ಬಗ್ಗೆ ಮಾಹಿತಿ ನೀಡಿದರು.

ಎಸ್‌ಜೆಸಿಇ ಪ್ರಾಂಶುಪಾಲರಾದ ಟಿ.ಎಸ್. ನಾಗಭೂಷಣರವರು, ಸ್ಯಾಟಲೈಟ್‌ಗಳಂತಹ ಸಂಕೀರ್ಣ ವಸ್ತುಗಳ ವಿನ್ಯಾಸ ಹಾಗೂ ನಿರ್ಮಾಣದಲ್ಲಿ ಬಳಕೆಯಾಗುವ ಗಣಿತ ಹಾಗೂ ಭೌತಶಾಸ್ತ್ರದ ಜ್ಞಾನದ ಅವಶ್ಯಕತೆ ಬಗ್ಗೆ ತಿಳಿಸಿದರು. ಕುಲಪತಿಗಳಾದ ಡಾ. ಬಿ.ಜಿ. ಸಂಗಮೇಶ್ವರ, ಕುಲಸಚಿವರಾದ ಶ್ರೀ ಕೆ.ಎಸ್. ಲೋಕೇಶ್, ಇ ಅಂಡ್ ಸಿ ವಿಭಾಗದ ಮುಖ್ಯಸ್ಥರಾದ ಡಾ. ಶಂಕರಯ್ಯ, ಡಾ. ಸುದರ್ಶನ ಪಾಟೀಲ ಕುಲಕರ್ಣಿ ಅವರು ಕಾರ್ಯಾಗಾರದ ಔಚಿತ್ಯ ಮತ್ತು ರೂಪುರೇಷೆಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು.

ಇಸ್ರೋ ಮಾಜಿ ವಿಜ್ಞಾನಿಗಳಾದ ಶ್ರೀ ಎಂ. ಪಿಚ್ಚಮಣಿ ಅವರು ಚಂದ್ರಯಾನದ ಬಗ್ಗೆ ವಿವರಿಸಿದರು. ಸಮಾರೋಪ ಸಮಾರಂಭದಲ್ಲಿ ಇಸ್ರೋ ಮಾಜಿ ವಿಜ್ಞಾನಿಗಳಾದ ಶ್ರೀ ಎಂ. ಕೃಷ್ಣಸ್ವಾಮಿ, ಬಾಹ್ಯಾಕಾಶ ಎಂಟರ್‌ಪ್ರೆನರ್ ಡಾ. ವಿ. ಜಯಕುಮಾರ್, ಐಐಟಿ ಪ್ರಾಧ್ಯಾಪಕರಾದ ಶ್ರೀ ಕೆ. ಜಯರಾಮನ್, ಡಾ. ರವಿಕುಮಾರ್ ಉಪಸ್ಥಿತರಿದ್ದರು. □

## ಜಾನುವಾರುಗಳ ರೋಗ ನಿಯಂತ್ರಣ ರಾಷ್ಟ್ರೀಯ ಕಾರ್ಯಕ್ರಮ

ದಿನಾಂಕ 11.9.2019 ರಂದು ಜಾನುವಾರ ರೋಗಗಳ ನಿಯಂತ್ರಣ ಯೋಜನೆ ಹಾಗೂ ರಾಷ್ಟ್ರೀಯ ಕೃತಕ ಗರ್ಭಧಾರಣಾ ಯೋಜನೆಗಳಿಗೆ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಉತ್ತರಪ್ರದೇಶದ ಮಥುರಾದಲ್ಲಿ ಚಾಲನೆ ನೀಡಿದರು. ಈ ಕಾರ್ಯಕ್ರಮದ ನೇರಪ್ರಸಾರವನ್ನು ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು.



80ಕ್ಕೂ ಅಧಿಕ ರೈತರು ನೇರಪ್ರಸಾರವನ್ನು ವೀಕ್ಷಿಸಿದರು. ಮೈಸೂರಿನ ಪಶುಪಾಲನೆ ಇಲಾಖೆಯ ಸಹಯೋಗದೊಂದಿಗೆ 40ಕ್ಕೂ ಹೆಚ್ಚು ರಾಸುಗಳಿಗೆ ಕಾಲುಬಾಯಿ ರೋಗ ಮತ್ತು ಕಂದು ರೋಗಗಳ ನಿಯಂತ್ರಣ ಲಸಿಕೆ ಹಾಕಲಾಯಿತು.

ಮೈಸೂರು ಜಿಲ್ಲೆಯ ವಿವಿಧ ತಾಲ್ಲೂಕಿನ ಪಶುವೈದ್ಯಾಧಿಕಾರಿಗಳು ಹಾಗೂ ಕೆವಿಕೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಶಿಕ್ಷಣದ ಉದ್ದೇಶ ಕೇವಲ ಉದ್ಯೋಗವಲ್ಲ

ಭಾರತ ದೇಶ ಸಾಂಸ್ಕೃತಿಕವಾಗಿ ತುಂಬಾ ಶ್ರೀಮಂತವಾದ ರಾಷ್ಟ್ರ. ಶಿಕ್ಷಣದ ಉದ್ದೇಶ ಕೇವಲ ಉದ್ಯೋಗ ಗಿಟ್ಟಿಸುವುದೇ ಆಗಬಾರದು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಸುತ್ತೂರು ಜೆಎಸ್‌ಎಸ್ ಸಂಸ್ಥೆಯು ವಿದ್ಯಾರ್ಥಿನಿಲಯದ ವಿದ್ಯಾಗಣಪತಿಯ ಪ್ರತಿಷ್ಠಾ

ಪನೆಯು ಪರಮಪೂಜ್ಯರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಜೀವನದಲ್ಲಿ ಉದ್ಯೋಗ ಗಳಿಸುವುದರ ಜೊತೆಗೆ ಸಂತೋಷ ಹೊಂದುವ ಮನೋಭಾವ ಹೊಂದಬೇಕು. ಮನುಷ್ಯನ ಮನಸ್ಸು ಸದಾ ಭಗವಂತನ ನಾಮಸ್ಮರಣೆ ಮಾಡಬೇಕು ಎನ್ನುವ ಕಾರಣಕ್ಕೆ ಹಬ್ಬಗಳ ಆಚರಣೆ ಮಾಡಲಾಗುತ್ತಿದೆ. ದೇಶದ ಜನತೆಯನ್ನು ಒಟ್ಟುಗೂಡಿಸಲು ಸಮಾನತೆ ತರಲು ಸ್ವಾತಂತ್ರ್ಯ ಸಂಗ್ರಾಮದ ಕಾಲಘಟ್ಟದಲ್ಲಿ ಬಾಲಗಂಗಾಧರ್ ತಿಲಕ್‌ರವರು ಈ ಆಚರಣೆಯನ್ನು ತಂದರು. ಎಲ್ಲಾ ಕೆಲಸಗಳು ನಿರ್ವಿಘ್ನವಾಗಿ ನೆರವೇರಲು ಎಲ್ಲಾ ಗಣಗಳಿಗೆ ಅಧಿಪತಿಯಾದ ಗಣಪತಿಯನ್ನು ಮೊದಲಿಗೆ ಪೂಜಿಸಲಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಮೆರಿಕದ ಸ್ಟೇಟ್ ಯೂನಿವರ್ಸಿಟಿ ಅಧ್ಯಕ್ಷರಾದ ಡಾ. ಗುರುರಾಜ್‌ರವರು ಮಾತನಾಡಿ, ಭವ್ಯವಾದ ಭವಿಷ್ಯವನ್ನು ರೂಪಿಸಲು ಪ್ರಾಥಮಿಕ ಶಿಕ್ಷಣದ ಪಾತ್ರ ಮಹತ್ತರವಾದುದು. ನಮ್ಮ ಭಾರತ ದೇಶದ ವಿದ್ಯಾವಂತ ಯುವಕರು ವಿಶ್ವದಾದ್ಯಂತ ಹರಡಿದ್ದಾರೆ. ಅಮೆರಿಕದ ಪ್ರಮುಖ ಕಂಪೆನಿಗಳ ಮುಖ್ಯಸ್ಥರು ಭಾರತೀಯರಾಗಿದ್ದಾರೆ ಎಂದು ಹೇಳಲು ಹೆಮ್ಮೆಯಾಗುತ್ತದೆ. ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಸಂದರ್ಭದಲ್ಲಿ ಸಂಸ್ಕೃತಿ ಹಾಗೂ ಸಂಸ್ಕಾರವನ್ನು ಮೈಗೂಡಿಸುವ ಶಿಕ್ಷಣ ವ್ಯವಸ್ಥೆ ಇರುವುದರಿಂದ ಅದು ಅವರಿಗೆ ಸಹಕಾರಿಯಾಗಿದೆ. ಹಳ್ಳಿಯ ಶಾಲೆಗಳಲ್ಲಿ ಇಂದಿಗೂ ಉತ್ತಮ ಕಲಿಕೆಯ ವಾತಾವರಣವಿದೆ. ಸುತ್ತೂರು ಶ್ರೀಕ್ಷೇತ್ರದಲ್ಲಿ ನಾಲ್ಕು ಸಾವಿರ ಬಡಮಕ್ಕಳಿಗೆ ಮೌಲ್ಯಾಧಾರಿತ, ಸಂಸ್ಕಾರಯುತ ಶಿಕ್ಷಣವನ್ನು ನೀಡುತ್ತಿರುವ ಪೂಜ್ಯ ಶ್ರೀಗಳವರ ಸೇವೆ ಅನನ್ಯವಾದುದು ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥರು, ವಸತಿ ಶಾಲೆಯ 4000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕರಾಟೆಯಲ್ಲಿ ಸಾಧನೆ

ಮೈಸೂರು ಜೆ.ಪಿ. ನಗರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಕು. ಕೆ.ಎಸ್. ಹೇಮಂತ್‌ಕುಮಾರ್ ದೆಹಲಿಯಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ನಡೆದ 'ಆಲ್ ಇಂಡಿಯಾ ಇಂಡಿಪೆಂಡೆನ್ಸ್ ಕಪ್ ಅಂತಾರಾಷ್ಟ್ರೀಯ ಕರಾಟೆ ಚಾಂಪಿಯನ್‌ಷಿಪ್‌ನ ಕುಮಿತ್ ವಿಭಾಗದಲ್ಲಿ ದ್ವಿತೀಯ ಸ್ಥಾನ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದು, ಪ್ರಾಂಶುಪಾಲರು ಮತ್ತು ಸಿಬ್ಬಂದಿವರ್ಗದವರು ಅಭಿನಂದಿಸಿದ್ದಾರೆ.

## ತಾಲ್ಲೂಕು ಮಟ್ಟದ ಥ್ರೋಬಾಲ್ ಮತ್ತು ಬಾಲ್‌ಬ್ಯಾಡ್ಮಿಂಟನ್ ಕ್ರೀಡಾಕೂಟ

ಮೈಸೂರು ಜೆ.ಪಿ. ನಗರ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಪದವಿಪೂರ್ವ



ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ತಾಲ್ಲೂಕು ಮಟ್ಟದ ಥ್ರೋಬಾಲ್ ಮತ್ತು ಬಾಲ್‌ಬ್ಯಾಡ್ಮಿಂಟನ್ ಕ್ರೀಡಾಕೂಟವನ್ನು ಏರ್ಪಡಿಸಲಾಗಿತ್ತು.

ಶರಣ ವೇದಿಕೆಯ ಅಧ್ಯಕ್ಷರಾದ ಶ್ರೀ ಎಸ್. ಪುಟ್ಟರಾಜಪ್ಪನವರು ಕ್ರೀಡಾಕೂಟವನ್ನು ಉದ್ಘಾಟಿಸಿದರು. ಥ್ರೋಬಾಲ್ ವಿಭಾಗದಲ್ಲಿ 40 ತಂಡಗಳು, ಬ್ಯಾಡ್ಮಿಂಟನ್ ವಿಭಾಗದಲ್ಲಿ 18 ತಂಡಗಳು ಭಾಗವಹಿಸಿದ್ದವು. ಮಹಾರಾಜ ಪದವಿಪೂರ್ವ ಕಾಲೇಜು, ವಿವೇಕಾನಂದ ಪದವಿಪೂರ್ವ ಕಾಲೇಜು ಕ್ರಮವಾಗಿ ವಿಜೇತ ತಂಡಗಳಾಗಿ ಹೊರಹೊಮ್ಮಿದವು.

## ಸ್ವಚ್ಛತಾ ಪಕ್ವಾಡ

ಮೈಸೂರಿನ ರಾಮಾನುಜ ರಸ್ತೆಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಸೆಪ್ಟೆಂಬರ್ 1 ರಿಂದ 15ರವರೆಗೆ 'ಸ್ವಚ್ಛತಾ ಪಕ್ವಾಡ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸ್ವಚ್ಛ ಶಪಥ ದಿನ, ಹಸಿರು ಶಾಲಾ ದಿನ, ಸ್ವಚ್ಛತಾ ಜಾಗೃತಿ ದಿನಗಳನ್ನು ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಮತ್ತು ಶಾಲಾ ಸಿಬ್ಬಂದಿಗೆ ಜಾಗೃತಿ ಮೂಡಿಸಲಾಯಿತು.

## ಜಿಲ್ಲಾ ಮಟ್ಟಕ್ಕೆ ಆಯ್ಕೆ



ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಆಗಸ್ಟ್ 29 ರಂದು ಏರ್ಪಡಿಸಿದ್ದ ಅಂತರ ವಲಯ ಮಟ್ಟದ 4x100 ಮಿ. ಓಟದ ಸ್ಪರ್ಧೆಯಲ್ಲಿ ಜೆಎಸ್‌ಎಸ್ ಬಾಲಜಗತ್‌ನ ಪ್ರಾಥಮಿಕ ಶಾಲಾ ವಿಭಾಗದ ಕು. ಜಿ. ಊರ್ಮಿಳ, ಕು. ಹರ್ಷಿತ ಹೆಗ್ಡೆ, ಕು. ಎಸ್. ಬಿಂದು, ಕು. ಎಸ್. ಸಿಂಧುರವರು ಪ್ರಥಮ ಸ್ಥಾನ ಪಡೆಯುವುದರ ಮೂಲಕ ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

# ರಾಜೇಂದ್ರ ಶ್ರೀಗಳವರ 104ನೆಯ ಜಯಂತಿ ಆಚರಣೆ

**ಕಲಿಕೆಯಲ್ಲಿ ಆಸಕ್ತಿ, ತಾಳ್ಮೆ ಬೆಳೆಸಿಕೊಳ್ಳಿ**

ವಿದ್ಯಾರ್ಥಿಗಳು ಕಲಿಕೆಯಲ್ಲಿ ಆಸಕ್ತಿ ಮತ್ತು ತಾಳ್ಮೆಯ ಗುಣ ಬೆಳೆಸಿಕೊಳ್ಳಬೇಕು ಎಂದು ಮೈಸೂರು ವಿವಿ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ. ಎಸ್.ಆರ್. ನಿರಂಜನ ತಿಳಿಸಿದರು.

ಬಿ.ಎನ್. ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ 104ನೇ ಜಯಂತಿ ಮತ್ತು ವಿದ್ಯಾರ್ಥಿ ವೇದಿಕೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಟ್ಟಿಗೆ ಕಲಿಕೆಯಲ್ಲಿ ತೊಡಗಬೇಕು, ವಿದ್ಯಾರ್ಥಿಗಳು ಸ್ವ-ಅಭಿವೃದ್ಧಿಯನ್ನು ಬೆಳೆಸಿಕೊಳ್ಳಬೇಕು. ನಳಂದ, ತಕ್ಷಶಿಲಾ ವಿಶ್ವವಿದ್ಯಾನಿಲಯಗಳನ್ನು ಮಾದರಿಯಾಗಿಟ್ಟುಕೊಂಡು ಇಂದಿನ ವಿಶ್ವವಿದ್ಯಾನಿಲಯಗಳು ಕಾರ್ಯ ನಿರ್ವಹಿಸ ಬೇಕಾಗಿದೆ. ಇತ್ತೀಚೆಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಂಪ್ಯೂಟರ್ ಜ್ಞಾನ ಹೊಂದಬೇಕಾಗಿದೆ. ಜೊತೆಗೆ ಎಲ್ಲ ವಿಷಯಗಳನ್ನು ಅವಶ್ಯಕವಾಗಿ ತಿಳಿದುಕೊಳ್ಳಬೇಕಾಗಿದೆ ಎಂದರು.

ಶಾಸಕರಾದ ಶ್ರೀ ಎಸ್.ಎ. ರಾಮದಾಸ್ ಮಾತನಾಡಿ, ಥಾಮಸ್ ಆಲ್ವಾ ಎಡಿಸನ್, ಅಲೆಕ್ಸಾಂಡರ್ ಗ್ರಹಾಂಬೆಲ್ ಅವರ ಬದುಕಿನ ರೀತಿಯನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು. ಸಾಧಕರನ್ನು ಮಾದರಿಯಾಗಿಸಿಕೊಳ್ಳಬೇಕು ಎಂದರು.

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕುರಿತು ನುಡಿನಮನ ಸಲ್ಲಿಸಿದ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ವಿವೇಕದಿಂದ ಕೂಡಿದ ವಿದ್ಯೆಯಿಂದ ಮಾತ್ರ ನಮಗೆ ನೆಮ್ಮದಿ, ಶಾಂತಿ ದೊರೆಯುತ್ತದೆ. ವಿದ್ಯಾರ್ಥಿಗಳು ಅಂಕಗಳಿಗೆ ಬೆಲೆ ಕೊಡದೆ ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡು ತಮಗೆ ತಾವೇ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ರಾಜೇಂದ್ರ ಶ್ರೀಗಳು ದೇಶಪ್ರೇಮ ಹೊಂದಿದ್ದರು. ಆದ್ದರಿಂದಲೇ ಸಮಾಜಕ್ಕೆ ಅಖಂಡ ಕೊಡುಗೆಯನ್ನು ನೀಡಿದರು. ಶ್ರೀಗಳವರು ಜ್ಞಾನದಾಸೋಹ, ಅನ್ನದಾಸೋಹ, ಆರೋಗ್ಯದಾಸೋಹ ಮಾಡಿದರು. ಎಲ್ಲರನ್ನೂ ತಮ್ಮಂತೆ ಭಾವಿಸುತ್ತಿದ್ದರು. ಅವರ ಶ್ರಮದ ಫಲವಾಗಿ ಜೆಎಸ್‌ಎಸ್ ಸಂಸ್ಥೆಯ ಬೇರು ಸುತ್ತೂರಿನಲ್ಲಿದ್ದರೂ, ಹಣ್ಣುಗಳೆಲ್ಲ ದೇಶದಲ್ಲಲ್ಲದೆ, ವಿದೇಶಗಳಲ್ಲೂ ಹರಡಿವೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪ, ಪ್ರೊ. ಡಿ.ಎಸ್. ಸದಾಶಿವಮೂರ್ತಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ತಾಳವಾಡಿ**

ರಾಜೇಂದ್ರ ಶ್ರೀಗಳು ತಾಳವಾಡಿ ಜನರೊಂದಿಗೆ ಅವಿನಾಭಾವಸಂಬಂಧವನ್ನು ಹೊಂದಿದ್ದರು. ಈ ಭಾಗದ ಶೈಕ್ಷಣಿಕ ಕ್ಷೇತ್ರಕ್ಕೆ ಅವರ ಕೊಡುಗೆ ಅವಿಸ್ಮರಣೀಯ. ಶಾಲೆ-ಕಾಲೇಜುಗಳನ್ನು ತೆರೆದು ಅನೇಕ ಸೌಲಭ್ಯಗಳನ್ನು ಒದಗಿಸಿಕೊಟ್ಟರು ಎಂದು ತಾಳವಾಡಿಯ ಬಸವ ಸಮಿತಿ ಖಜಾಂಚಿಗಳಾದ ಶ್ರೀ ಶಾಂತಮಲ್ಲಪ್ಪನವರು ದಿನಾಂಕ 29.8.2019 ರಂದು ತಾಳವಾಡಿಯ ಜೆಎಸ್‌ಎಸ್ ಶಿಕ್ಷಣ

ಸಂಸ್ಥೆಗಳ ಆಶ್ರಯದಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 104ನೆಯ ಜಯಂತಿಯಲ್ಲಿ ಶ್ರೀಗಳ ಗುಣಗಾನ ಮಾಡಿದರು.

ಪ್ರಾಂಶುಪಾಲರಾದ ಶ್ರೀ ಎಂ. ಶಿವಕುಮಾರ ಸ್ವಾಮಿಯವರು ಶ್ರೀಗಳ ವಿಚಾರಧಾರೆಗಳನ್ನು ನಾವೆಲ್ಲರೂ ಅನುಸರಿಸಬೇಕು. ಪ್ರತಿನಿತ್ಯವು ಅವರ ಸ್ಮರಣೆ ಮಾಡಬೇಕು ಎಂದು ಹೇಳಿದರು.

ಗುಮಟಾಪುರದ ಶ್ರೀ ಗಂಗಾಧರ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಕನ್ನಡಪರ ಹೋರಾಟಗಾರರಾದ ಶ್ರೀ ಚನ್ನಂಜಪ್ಪನವರು, ಮೇಲ್ವಿಚಾರಕರಾದ ಶ್ರೀ ಎಂ. ವೆಂಕಟರಾಜು, ಶಿಕ್ಷಕರಾದ ಶ್ರೀ ಕೆಂಪರಾಜು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ರಾಜೇಂದ್ರ ಶ್ರೀಗಳವರ ಸಂಸ್ಮರಣೆ**

ಜೆ.ಪಿ. ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 5.9.2019 ರಂದು ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರು, ಶ್ರೀ ಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ರಾಜಗುರುತಿಲಕ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 104ನೇ ಜಯಂತಿಯನ್ನು ಆಚರಿಸಲಾಯಿತು.

ಶ್ರೀಗಳವರ ಭಾವಚಿತ್ರಕ್ಕೆ ಪ್ರಾಂಶುಪಾಲರು, ಉಪ ಪ್ರಾಂಶುಪಾಲರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪುಷ್ಪಾರ್ಚನೆಯ ಮೂಲಕ ಗೌರವ ಸಲ್ಲಿಸಿದರು. ವಿದ್ಯಾರ್ಥಿಗಳ ವಚನ ಗಾಯನದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಶಾಲೆಯ ನೃತ್ಯ ಶಿಕ್ಷಕಿ ಶ್ರೀಮತಿ ಲಕ್ಷ್ಮೀಕುಮಾರ್ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ನಂತರ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮಗಳು ಜರುಗಿದವು.

**ಜೆಎಸ್‌ಎಸ್ ಗಾಯತ್ರಿ ಪ್ರೌಢಶಾಲೆ, ಮಾಲೂರು**

ತ್ರಿವಿಧ ದಾಸೋಹದ ಮೂಲಕ ರಾಜೇಂದ್ರ ಶ್ರೀಗಳವರು ಸಮಾಜದ ಏಳಿಗೆಗಾಗಿ ಕಾಯಕದಲ್ಲಿ ತೊಡಗಿಕೊಂಡರು ಎಂದು ಮಾಲೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಎಸ್.ಎಚ್. ಮಹೇಶ್ವರಪ್ಪನವರು ಹೇಳಿದರು.

ಮಾಲೂರು ಜೆಎಸ್‌ಎಸ್ ಗಾಯತ್ರಿ ಪ್ರೌಢಶಾಲೆಯಲ್ಲಿ ದಿನಾಂಕ 29.8.2019 ರಂದು ರಾಜೇಂದ್ರ ಶ್ರೀಗಳ ಜಯಂತಿ ಉದ್ಘಾಟಿಸಿ ಮಾತನಾಡುತ್ತಾ 1986 ಆಗಸ್ಟ್ 29 ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು ಪೂಜ್ಯರು ಸ್ಥಾಪಿಸಿದರು. ಕಳೆದ ಮೂರು ವರ್ಷಗಳಿಂದ ಈ ದಿನವನ್ನು ವಚನ ದಿನವನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಇದು ಜಯಂತಿಗೆ ಹೆಚ್ಚಿನ ಮೆರಗನ್ನು ನೀಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿಗಳಾದ ಶ್ರೀ ಮಾ.ಮಂ. ತಮ್ಮಯ್ಯನವರು ಪೂಜ್ಯರು ದೇಶ–ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ನೀಡಿದ್ದಲ್ಲದೆ ಶಿವಶರಣರ ವಚನಗಳು ಮತ್ತು ಅವುಗಳ ಮೌಲ್ಯವನ್ನು ಸಮಾಜಕ್ಕೆ ತಲುಪಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ "ವಚನ ಸಂಪತ್ತು ಉಳಿಸಿಕೊಟ್ಟವರು ಮತ್ತು ವಚನ ಸಾಹಿತ್ಯದಲ್ಲಿ

ಪ್ರತಿಪಾದಿತವಾದ ವಿಶ್ವ ಮೌಲ್ಯಗಳು" ಎಂಬ ವಿಷಯ ಕುರಿತು ಶ್ರೀ ಜೆ.ಇ. ಬಸವರಾಜಪ್ಪನವರು ಉಪನ್ಯಾಸ ನೀಡಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎನ್.ಆರ್. ಜ್ಞಾನಮೂರ್ತಿ, ಮುಖ್ಯ ಶಿಕ್ಷಕರಾದ ಶ್ರೀ ಶಂಕರಲಿಂಗಯ್ಯ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ಪ್ರೌಢಶಾಲೆ, ದೇವಲಾಪುರ**

ದೇವಲಾಪುರದ ಜೆಎಸ್‌ಎಸ್ ಪ್ರೌಢಶಾಲೆ ಯಲ್ಲಿ ದಿನಾಂಕ 29.8.2019 ರಂದು ರಾಜೇಂದ್ರ ಶ್ರೀಗಳವರ ಜಯಂತಿಯನ್ನು ಆಚರಿಸಲಾಯಿತು. ಸಹ ಶಿಕ್ಷಕರಾದ ಶ್ರೀ ಬಿ. ಜಗದೀಶರವರು ಪೂಜ್ಯರ ಮಾನವೀಯ ಮೌಲ್ಯಗಳ ಕುರಿತು ಉಪನ್ಯಾಸ ನೀಡಿದರು. ಇದೇ ಸಂದರ್ಭ ದಲ್ಲಿ ತಾಲ್ಲೂಕು ಮಟ್ಟದ ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿನಿ ಯರಿಗೆ ಪದಕ ವಿತರಿಸಲಾಯಿತು. ಮುಖ್ಯೋಪಾ ಧ್ಯಾಯರಾದ ಶ್ರೀ ಜಿ.ಪಿ. ನಂಜುಂಡ ಸ್ವಾಮಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ಪಬ್ಲಿಕ್ ಶಾಲೆ, ಬಾಗೆ**

ಜಗತ್ತಿಗೆ ವಚನ ಸಾಹಿತ್ಯದ ಕೊಡುಗೆ ಅಪಾರ. ಅದರಲ್ಲಿ ಸಮಾಜದ ಒಳಿತಿಗಾಗಿ ಇರುವ ಸಕಾರಾತ್ಮಕವಾದ ಅಂಶಗಳು ಹೇರಳವಾಗಿವೆ ಎಂದು ಶ್ರೀ ವೈ.ಸಿ. ರುದ್ರಪ್ಪನವರು ಹೇಳಿದರು.

ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 29.8.2019 ರಂದು ಏರ್ಪಡಿಸಿದ್ದ ರಾಜೇಂದ್ರ ಶ್ರೀಗಳವರ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. 12ನೇ ಶತಮಾನದಲ್ಲಿ ಶರಣರು ಸಾಮಾನ್ಯ ಜನರಿಗೂ ಅರ್ಥವಾಗುವ ಹಾಗೆ ವಚನಗಳನ್ನು ರಚಿಸಿ ಸಮಾಜಕ್ಕೆ ಕೊಡುಗೆ ನೀಡಿದರು. ಅದೇ ತತ್ವದಲ್ಲಿ ರಾಜೇಂದ್ರ ಶ್ರೀಗಳು ನಡೆದು ನಮ್ಮೆಲ್ಲರ ಬಾಳಿಗೆ ಬೆಳಕಾದರು ಎಂದು ಸ್ಮರಿಸಿದರು.

ಸಹಾಯಕ ಪ್ರಾಧ್ಯಾಪಕರಾದ ಶ್ರೀ ಆರ್. ಮಂಜುನಾಥ್‌ರವರು ಮಾತನಾಡಿ, ಪೂಜ್ಯರ ಜಯಂತಿಯನ್ನು ನಾಡಿನಾದ್ಯಂತ 'ವಚನ ದಿನ' ಎಂದು ಆಚರಿಸಲಾಗುತ್ತಿದೆ. ಪೂಜ್ಯ ರಾಜೇಂದ್ರ ಶ್ರೀಗಳು ಸಮಾಜದಲ್ಲಿನ ಬಡತನ ಹಾಗೂ ಶಿಕ್ಷಣದ ಸಮಸ್ಯೆ ಕಂಡು ಮರುಗಿದರು. ನಿಸ್ವಾರ್ಥ ಮನೋಭಾವನೆಯಿಂದ ಶ್ರಮವಹಿಸಿ ಕಾಯಕದಲ್ಲಿ ತೊಡಗಿದರು. ವಿದ್ಯೆ ಅರಸಿ ಬಂದ ಸಾವಿರಾರು ಮಕ್ಕಳಿಗೆ ವಸತಿ, ಊಟ, ಶಿಕ್ಷಣ ನೀಡಿ ಸಮಾಜಕ್ಕೆ ಬೆಳಕಾದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 'ವಚನ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಎಂಬ ವಿಷಯದ ಕುರಿತು ಶ್ರೀಮತಿ ಸುಮಾ ವೀಣಾರವರು ವಿಶೇಷ ಉಪನ್ಯಾಸ ನೀಡಿದರು. ಪ್ರಾಂಶುಪಾಲರಾರ ಶ್ರೀ ಬಿ. ಮಧುಕುಮಾರ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ವಿಕಲಚೇತನರ ಪಾಲಿಟೆಕ್ನಿಕ್ ಮೈಸೂರು**

ಜೆಎಸ್‌ಎಸ್ ಮಹಾವಿದ್ಯಾಪೀಠವು ಸಮಾಜಕ್ಕೆ ಮಾದರಿಯಾಗುವ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದು, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಸೇವೆಯನ್ನು ವಿಸ್ತರಿಸುತ್ತಾ ಸಾಗುತ್ತಿದೆ ಎಂದು ಮಹಾರಾಣಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಬಿ.ವಿ. ವಸಂತಕುಮಾರ್‌ರವರು ತಿಳಿಸಿದರು.

ದಿನಾಂಕ 5.9.2019 ರಂದು ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ ರಾಜೇಂದ್ರ ಶ್ರೀಗಳವರ ಜಯಂತಿ ಹಾಗೂ ಶಿಕ್ಷಕರ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು. ಪೂಜ್ಯರ ತ್ಯಾಗದಿಂದಾಗಿ ಲಕ್ಷಾಂತರ ವಿದ್ಯಾರ್ಥಿಗಳು ಜೀವನ ರೂಪಿಸಿಕೊಂಡಿದ್ದಾರೆ. ಆರೋಗ್ಯಕರ ಸಮಾಜಕ್ಕಾಗಿ ಆಸ್ಪತ್ರೆಗಳನ್ನು ತೆರೆದಿದ್ದಲ್ಲದೆ, ಸಾವಿರಾರು ಕುಟುಂಬಗಳಿಗೆ ಉದ್ಯೋಗಾವಕಾಶ ಕಲ್ಪಿಸಿದ್ದಾರೆ. ಅವರ ಕಾಯಕವನ್ನು ಪ್ರಸ್ತುತ ಜಗದ್ಗುರುಗಳು ಮುಂದುವರೆಸಿರುವುದು ನಮ್ಮ ಸೌಭಾಗ್ಯ. ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ಶಿಕ್ಷಕರಾಗಿ, ತತ್ವಜ್ಞಾನಿಗಳಾಗಿ ಆದರ್ಶ ತತ್ವಗಳಿಗೆ ಹೆಸರುವಾಸಿಯಾಗಿದ್ದರು. ಶಿಕ್ಷಣ ನೀತಿ ಹಾಗೂ ವಿದ್ಯಾರ್ಥಿಗಳ ಅಧ್ಯಯನದ ಬಗ್ಗೆ ಸದಾ ಕಾಳಜಿ ವಹಿಸುತ್ತಿದ್ದರು ಎಂದು ಸ್ಮರಿಸಿದರು.

ಪ್ರಾಂಶುಪಾಲರಾದ ಶ್ರೀ ಬಿ. ಇಳಂಗೋವನ್ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಸಂಧ್ಯಾ ಪಾಟೀಲ್ ಸ್ವಾಗತಿಸಿದರು. ಡಾ. ಪಳನಿಸ್ವಾಮಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕು. ಸ್ಪರ್ಶ ಮತ್ತು ಕು. ಸಲ್ಮಬಾನು ನಿರೂಪಿಸಿದರು. ಕು. ಲಿಂಗಪ್ರಿಯ ವಂದಿಸಿದರು.

### ಜೆಎಸ್‌ಎಸ್ ಮಹಿಳಾ ಟಿಟಿಐ ಕಾಲೇಜು, ಸರಸ್ವತಿಪುರಂ

ದಿನಾಂಕ 11.9.2019 ರಂದು ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಟಿಟಿಐ/ಡಿ.ಇಎಲ್.ಇಡಿ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರು ರಾಜೇಂದ್ರ ಶ್ರೀಗಳವರ ಜಯಂತಿ ಆಚರಿಸಲಾಯಿತು. ನಿವೃತ್ತ ಉಪನ್ಯಾಸಕರಾದ ಶ್ರೀಮತಿ ಎಂ.ಎ. ನೀಲಾಂಬಿಕಾರವರು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕುರಿತು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ 2019–20ನೇ ಸಾಲಿನಲ್ಲಿ ಅತಿ ಹೆಚ್ಚು ಅಂಕ ಪಡೆದ ದ್ವಿತೀಯ ಡಿ.ಇ.ಎಲ್.ಇಡಿ. ಪ್ರಶಿಕ್ಷಣಾರ್ಥಿ ಶ್ರೀಮತಿ ಕೆ.ಬಿ. ರೇಖಾರವರಿಗೆ ಷಡಕ್ಷರ ಸ್ಮಾರಕ ಸಮಿತಿ, ದತ್ತಿ ನಗದು ಬಹುಮಾನ ವಿತರಿಸಲಾಯಿತು.

### ಜೆಎಸ್‌ಎಸ್ ಪ್ರೌಢಶಾಲೆ, ಬಂಡಳ್ಳಿ

ದಿನಾಂಕ 21.9.2019 ರಂದು ಬಂಡಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ರಾಜೇಂದ್ರ ಶ್ರೀಗಳವರ ಜಯಂತಿ ಹಾಗೂ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯೋಪಾಧ್ಯಾಯರಾದ ಶ್ರೀ ದೊರೆಸ್ವಾಮಿಯವರು ಪೂಜ್ಯರ ಕಾಯಕ ನಿಷ್ಠೆ, ಜಾತ್ಯಾತೀತ ಮನೋಭಾವ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸ್ಥಾಪನೆಯಲ್ಲಿ ಅವರ ಪರಿಶ್ರಮವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.



ಶಿಕ್ಷಕರಾದ ಶ್ರೀ ಬಿ.ಜಿ. ನಂಜುಂಡಸ್ವಾಮಿ ರಾಜೇಂದ್ರ ಶ್ರೀಗಳವರ ಜೀವನ, ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ಹೊಂದಿದ್ದ ಕಳಕಳಿ, ಶಿಕ್ಷಣ,

ಆರೋಗ್ಯ, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಿಗೆ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

ಶಿಕ್ಷಕರ ದಿನಾಚರಣೆಯನ್ನು ಕುರಿತು ಶಿಕ್ಷಕರಾದ ಶ್ರೀ ಜಯಪ್ಪರವರು ಮಾತನಾಡಿದರು. ಶಿಕ್ಷಕರಾದ ಶ್ರೀ ರಾಮಶೆಟ್ಟಿಯವರು ಪ್ರಾರ್ಥಿಸಿದರು. ಕು. ಕಾವ್ಯ ಸ್ವಾಗತಿಸಿದರು. ಕು. ಸಾನುಪ್ರಿಯ ವಂದಿಸಿದರು. ಕು. ನಂದಿತಾ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಸ್ವತಂತ್ರ ಪದವಿಪೂರ್ವ ಕಾಲೇಜು, ಕೌಡಳ್ಳಿ

ಸಕಲೇಶಪುರ ತಾಲ್ಲೂಕಿನ ಕೌಡಳ್ಳಿ ಜೆಎಸ್‌ಎಸ್ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿ ರಾಜೇಂದ್ರ ಶ್ರೀಗಳವರ ಜಯಂತಿ ಹಾಗೂ ಹುಣ್ಣಿಮೆ ಉಪನ್ಯಾಸ 3ನೆಯ ಮಾಲಿಕೆಯು ಸೆಪ್ಟೆಂಬರ್ 14 ರಂದು ನಡೆಯಿತು. ಕಾರ್ಯಕ್ರಮದಲ್ಲಿ ಕು. ಹಾರಿಕಾ ಮಂಜುನಾಥ್‌ರವರು "ನಾನು ಮತ್ತು ನನ್ನ ದೇಶ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಪ್ರಾಧ್ಯಾಪಕರಾದ ಶ್ರೀ ಆರ್.ಎಂ. ಮಂಜುನಾಥ್‌ರವರು ರಾಜೇಂದ್ರ ಶ್ರೀಗಳಿಗೆ ನುಡಿನಮನ ಸಲ್ಲಿಸಿದರು.

ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷರಾದ ಶ್ರೀ ದೇವರಾಜು, ಅಕ್ಕಮಹಾದೇವಿ ಸಂಘದ ಅಧ್ಯಕ್ಷರಾದ ಶ್ರೀಮತಿ ರೇಖಾ ಸುರೇಶ್, ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಜೆಎಸ್‌ಎಸ್ ಪ್ರೌಢಶಾಲೆ, ಕೆ.ಆರ್. ನಗರ

ಕೆ.ಆರ್. ನಗರದ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ದಿನಾಂಕ 29.8.2019 ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 104ನೇ ಜಯಂತಿಯನ್ನು ಆಚರಿಸಲಾಯಿತು. ಉದ್ಘಾಟನೆಯನ್ನು ವೀರಶೈವ ಮಹಾಸಭಾದ ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀಯುತ ಕೆಂಪರಾಜುರವರು ನೆರವೇರಿಸಿದರು. ಅರಕೆರೆಯ ಶ್ರೀ ಸಿದ್ದೇಶ್ವರ ಸ್ವಾಮಿಗಳವರು ದಿವ್ಯ ಸಾನ್ನಿಧ್ಯ ವಹಿಸಿದ್ದರು.



ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀಯುತ ಸಿ.ಪಿ. ರಮೇಶ್‌ರವರು ಮಾತನಾಡಿ ವ್ಯಾಸಂಗ ಮಾಡುವುದೆಂದರೆ, ಅದೊಂದು ಸೌಭಾಗ್ಯ. ಕೇವಲ ಜ್ಞಾನಾರ್ಜನೆ ಪಡೆಯುವುದು ಮಾತ್ರವಲ್ಲದೇ ವಿದ್ಯಾರ್ಥಿಯು ಸರ್ವತೋಮುಖ ಬೆಳವಣಿಗೆಯನ್ನು ಹೊಂದಿ, ಪರಿಪಕ್ವವಾದ ವ್ಯಕ್ತಿತ್ವವನ್ನು ಹೊಂದಬೇಕೆಂದು ತಿಳಿಸಿದರು. ಜೆಎಸ್‌ಎಸ್ ಸಂಸ್ಥೆಯು ಉತ್ತಮ ಸಂಸ್ಕಾರಕ್ಕೆ ದಾರಿದೀಪವಾಗಿದೆ ಎಂದು ತಿಳಿಸಿದರು.

ಆರಕ್ಷಕ ವೃತ್ತ ನಿರೀಕ್ಷಕರಾದ ಶ್ರೀ ಕೆ. ರಾಜು ವೀರಶೈವ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಪ್ರಕಾಶ್, ಶರಣ ಸಾಹಿತ್ಯ ಪರಿಷತ್ ಘಟಕದ ಉಪಾಧ್ಯಕ್ಷರಾದ ಶ್ರೀ ರಾಜಶೇಖರ್, ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಕ್ಲಸ್ಟರ್ ಮಟ್ಟದಲ್ಲಿ ನಡೆದ 2019-20ನೇ ಸಾಲಿನ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಮೈಸೂರಿನ ಜೆಎಸ್‌ಎಸ್ ಆಂಗ್ಲಮಾಧ್ಯಮ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳೊಂದಿಗೆ ಮುಖ್ಯ ಶಿಕ್ಷಕರಾದ ಶ್ರೀಮತಿ ಎಚ್.ಎಂ. ಶೈಲಜಾ ಮತ್ತು ಸಹಶಿಕ್ಷಕಿಯರಾದ ಶ್ರೀಮತಿ ಎಂ.ಎಸ್. ದೀಪಾರಾಣಿ ಇದ್ದಾರೆ



ಕ್ಲಸ್ಟರ್ ಮಟ್ಟದಲ್ಲಿ ನಡೆದ 2019-20ನೇ ಸಾಲಿನ ಪ್ರತಿಭಾ ಕಾರಂಜಿಯ ಸ್ಪರ್ಧೆಗಳಲ್ಲಿ ಮೈಸೂರಿನ ಜೆಎಸ್‌ಎಸ್ ಆಂಗ್ಲಮಾಧ್ಯಮ ಪ್ರೌಢಶಾಲಾ ವಿದ್ಯಾರ್ಥಿಗಳು ಭಾಗವಹಿಸಿ ವಿಜೇತರಾಗಿದ್ದಾರೆ ಚಿತ್ರದಲ್ಲಿ ಮುಖ್ಯ ಶಿಕ್ಷಕರಾದ ಶ್ರೀಮತಿ ಎಚ್.ಎಂ. ಶೈಲಜಾ ಮತ್ತು ಸಹಶಿಕ್ಷಕಿಯರಾದ ಶ್ರೀಮತಿ ಎಸ್.ಬಿ. ಅನ್ನಪೂರ್ಣ ಇದ್ದಾರೆ

## ENGLISH SECTION

### TEQIP- III SPONSORED WORKSHOP HELD

A workshop on "Research Proposal Preparation" sponsored by TEQIP III was held on 5.9.2019 by the Dept. of Electronics and Communication, SJCE

Chief guest Dr. N. Suresh spoke about the role of teachers in building students' future and their solutions to societal problems. He shared on how the research proposals are to be drafted and submitted to various agencies. Dr. B. Manoj Kumar, Prof. & TEQIP-coordinator, spoke about TEQIP milestones and its various accomplishments in conducting




At the Inauguration Dr. N. Suresh, Prof. and Head, Department of Civil engineering, NIE, Mysore, with Dr. Shankaraiah,Prof. and Head, Department of ECE, Dr. Manoj Kumar, TEQIP III coordinator and Dr. M. N. Jayaram, Program coordinator

responsibilities. He also advised teachers to be in touch with the latest technologies. He added that the funding agencies are looking towards collaborative researchers who pave way towards modern technological programs that were held at the University. He added that the JSS STU is successful in conducting and benefitting the teaching fraternity through such programs.

## Nokia Univ. Collaboration Program

The Nokia Academic Partnership Program is an IP technology and education event for colleges and universities to help students globally to prepare for high-demand jobs in the field of Network Communications and Engineering.

As a part of the university collaboration program, the University Day @ Nokia was organized on 5.9. 2019 at Nokia, Bengaluru.

12 students from JSS STU, accompanied by Prof. N. Shivaprasad and Prof. M.S. Vinayprasad took part in the University Day at Nokia. Five students viz., B.A. Darshan, E. Dushyantha Kumar, S. Gagan, B.R. Prajwal and M.G. Pruthvi, were the finalists in the Student Project Roadshow who demonstrated the real time working of LiFi by live steaming video through Nginx which is open source software for web serving, reverse proxying, caching, load balancing and media streaming. LiFi dongle was installed in the Laptop providing downlink communication through the Visible light and Uplink communication through InfraRed Light.

The project was guided by Sri. Jos George Thikudam and Ms. Vidya from Nokia and faculty Prof. S.D. Yashwanth. Department of E & CE, JSS STU.




Seen in the photograph are Miss Vidhyavathi (fifth from Left), M.S. Vinayprasad (sixth from Left), Sri Jos Jeorge (sixth from right), Sri Arun Mathew (fifth from Right) Sri. N. Shivaprasad (fourth from right) and students of the Department

## Lecture Delivered

The Department of Industrial and Production Engineering, JSS Science and Technology University, had organized an invited talk on "Management of Memory and Concentration - Challenges and opportunities" and World Alzheimer's September Poster was released by Dr. T.R. Srinivas, Prof. and Head, Dept of I&PE, Dr. Manoj kumar, TEQIP. III Co-ordinator, SJCE, and Dr. Hanumanthachar Joshi, Prof. & Head, Saradavilas College of Pharmacy, Mysore and President of Alzheimer's and Related Disorders Society of India (ARDSI), Mysuru Chapter.



From L-R: Prof. D. Karibasavaraja, Prof. C. Sowmya (Event Coordinator), Dr. B. Manjoj Kumar (TEQIP Coordinator), Guest Speaker Dr. Hanumanthachar Joshi, Prof & Head of the Department, Dr. Srinivas, Dr. D. Arunkumar, Dr. M. Savitha and Dr. V. Ramesh

Dr. Hanumanthachar Joshi gave a glimpse on Alzheimer's Disease and its effect on the individual. Memory loss that disrupts daily life may be a symptom of Alzheimer's or other types of Dementia. Alzheimer's is a brain disease that causes a slow decline in memory, thinking and reasoning skills. One of the most common signs of Alzheimer's disease, especially in the early stage, is forgetting the recently-learned information. Others include forgetting important dates or events, asking for the same question over and over and increasingly needing to rely on memory aids or persons for things they used to handle on their own earlier.

## Workshop on Nano-satellite Technology

A five-day workshop on Nano-satellite Technology was inaugurated on 16.9.2019. The event began with an invocation, followed by a welcome address by S. Dr. Shankaraiah, Head of the Department, Electronics and Communication, JSSSTU. An overview of the workshop was presented by Dr. Sudarshan Patil Kulkarni. Chief Guest Dr. S. Rangarajan Former Director, ISTRAC, ISRO, Bangalore, during his talk, highlighted the importance and specialities of nano-satellites. He explained the significance of the timing of the workshop, this year being the Birth Centenary of Dr. Vikram Sarabhai, Founder of ISRO. Principal T.N. Nagabhushan emphdsised the relation of JSSSTU with ISRO. Sri K.S. Lokesh, Registrar urged the participants to make best of the opportunity to interact with the best space scientists. Vice-Chancellor Prof. B.G. Sangameshwara conveyed his best wishes to the participants.

The Inauguration function was followed by a special session on Chandrayaan-2 in a packed auditorium of curious students, where former ISRO Scientist, Sri M. Pitchaimani elaborated on all the technical aspects of the mission. He explained in detail the challenges involved in three stages, namely, launching, orbit capturing and landing. He explained that one of the reasons for failure in landing could be due to higher thrust and the exact reason is under investigation. At the end of the talk, the speaker answered the questions post for the by the audience.

## Prayas IEEE-
## SJCE Outreach Program

IEEE Women in Engineering (WIE) is a global network of IEEE members and volunteers dedicated to promote women engineers and scientists and inspire girls around the world to follow their academic interests in a career in engineering and science. Women in Engineering a wing of IEEE-SJCE is engaged in a lot of humanitarian as well as technical activities with the aim of bringing equitable education to the underprivileged children.

PRAYAS, an outreach programme initiated by IEEE SJCE WIE aimed to provide aid in basic education for underprivileged children is an



endeavour that involves weekly visits by the volunteers to help children. In PRAYAS, the students are helped in academics, introduce fun learning techniques and aim to achieve overall development. This year, a reach-out initiative was taken up at Rangarao Memorial School for differently abled children. The school is a part of the NR Foundation, a non-profit Charitable Trust promoted by NR Group, recognized by both State and Central governments. The School offers regular curriculum for the students upto the 10th Standard. PRAYAS volunteers are given the opportunity to handle students from class 1 to class 9. About 25 volunteers have served for 3 weeks. In the first week, they helped students to introduce themselves in English. In the second week emphasis, was given on tense and sentence formation. The third week was celebrated as Teachers' Day where students made a small speech for their favourite teacher, day In all, 88 students participated in basic speaking skills and enriched their knowledge.

## JSS PUBLIC SCHOOL J.P. NAGAR, MYSORE

JSS Public School, J.P Nagar celebrated the Kite festival on 3.8.2019, in the school Premises. The campus was decorated aptly to showcase the kite flying fest.

International Kite Flier, Smt. Poornima inaugurated the festival. She has participated in many international kite festivals and was honoured by the Prime Minister Sri Narendra Modi, in 2018.

It was a memorable morning, with the colourful kites soaring in the sky.

The students from standard VI to X were asked to bring their own kites to fly. It was an amazing site to see the colourful kites in the sky. Students had great fun at school and everyone in the event participated enthusiastically.

## Scientist in School - Dr .C. D. Prasad

You can take the man out of his adventure, but you cannot take the adventure out of the man. This is the case with Dr. C.D. Prasad, a retired scientist from ISRO who is now reaching out to and inspiring thousands of students across India. Dr. Prasad has worked along with Dr. A.P.J. Abdul Kalam, former President and the iconic Rocket Man of India. Under the mentorship of Dr. Kalam, Sri Prasad worked in the development of the satellite launch vehicle at the Vikram Sarabhai Space Centre, Thiruvanantha -puram. He visited JSS Public School, J.P. Nagar on 8.8.2019, motivated and inspired all the staff and students by his informative speech and presentation. After all, science is more than just a textbook; it's a way of life, an exciting journey full of mysteries and surprises. And what better way to communicate the message than to gain knowledge about rockets and space missions directly from a rocket scientist!

Explaining the science which took years and thousands of scientists to formulate a three-hour session to school kids was a tough job, especially when there were so many interesting facts to convey. But Dr. Prasad managed to deliver that mission effortlessly.

The sessions were very engaging and awe-inspiring filled with technicalities, real-life stories, old photographs and videos of the rocket launchers. With the manner Dr. Prasad explained the atmosphere at the moment of the launch, one would feel the tension building up the nerves!

## FIT INDIA MOVEMENT

Success is related to fitness, success stories of all our icons from any field of life have a common thread - most of them are fit, have a focus on fitness and are fond of fitness.

The launching of 'FIT INDIA MOVEMENT' took place by the Hon'ble Prime Minister on 29.8.2019 at Indira Gandhi Indoor Stadium, New Delhi. During the launch, the Prime Minister administered a Fitness Pledge.

The event was cast live by Doordarshan through DD National, DD News and DD India. All the students of JSS Public School, J.P. Nagar, Mysuru from classes 8, 9 were part of this session. when the students took up the pledge soon after the event.

## Dental Check-up for Students

JSS Dental College & Hospital, Mysuru is a centre of excellence in Dental Education, with the objective of strengthening the health care in the society. A free Dental Check-Up was carried out for the students of JSS Public School, J.P. Nagar, Mysuru from Kindergarten to Class 7 and also the parents was held. Dr. Nandlal, Dr. Raghavendra, Dr. Shruthi and Dr. Priyanka were part of the event and oriented all the parents with a live demonstration about how to teach children to brush their teeth and also about montoring their food habits. Children learnt a lot from this session and the staff and parents of the kindergarten felt that they welcomed many more sessions like this.



## Seminar on Income Tax and TDS

A Seminar on Income Tax, TDS and its compliance was conducted on 30.8.2019 at JSS College of Arts, Commerce & Science, Ooty Road, Mysuru. Sri B.V. Sambashivaiah CEO, Principals, Sri M.V. Shankara, CA, ITO's Sri Ranganath, Smt. Indiramma, IT Inspector Sri Manjunath and Sri N.D. Srinivas of M/s. Bhavani Associates, Mysuru were present. Sri Putta subbappa, Director (Finance) JSS MVP gave an introductory speech and Sri. K.R. Santhanam, Director (Account & Audit) briefed about TDS as well as the importance of such seminars. The Principals and the staff members dealing with TDS in institutions were present. About 280 delegates participated from various JSS institutions of Mysuru and Chamaraja-nagar Districts.

Sri Manjunath and Sri N.D. Srinivas delivered lecture on TDS and its compliance. Sri M.V. Shankara, CA and Sri Ranganath, ITO clarified the doubts raised by the participants. TDS on salary, Contractor's payments, rent on land buildings, interest on FD, obtaining TDS exemption certificates, interest on late payments, penalty, late fee u/s 234E, prosecution etc., were discussed in detail. The Drawing & Disbursing Officers and the Case-workers attending the TDS work in varions offices/institutions were properly appraised of the importance of prompt recovery of TDS, payment to Income Tax Authorities, filing of e-TDS returns in time and other compliances accordingly.

ಶ್ರೀಕ್ಷೇತ್ರದಲ್ಲಿ 2019 ರಲ್ಲಿ ಜರುಗಲಿರುವ

**ತಿಂಗಳ ಸಾಮೂಹಿಕ ವಿವಾಹ**

**ಡಿಸೆಂಬರ್ 6, ಶುಕ್ರವಾರ**

**ವಿವರಗಳಿಗೆ ಸಂಪರ್ಕಿಸಿ:**
**ಆಡಳಿತಾಧಿಕಾರಿಗಳು**
**ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**

**ದೂರವಾಣಿ ಸಂಖ್ಯೆ : 08221–232559, 232033, 232044**

When trouble strikes them, Lord,
they think of You.
As soon as trials and troubles are over,
Lord, even if they stumble on You,
they don't see You,
*Ramanatha.*

*- Jedara Dasimayya*



ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಕಾಲೇಜುಗಳಲ್ಲಿ ಉಚಿತ ಶಿಕ್ಷಣ ಪಡೆಯಲು ದಾಖಲಾದ ಉತ್ತರ ಕರ್ನಾಟಕ ಜಿಲ್ಲೆಗಳ ನೆರೆಹಾವಳಿ ಸಂತ್ರಸ್ತರ ಮಕ್ಕಳೊಂದಿಗೆ ಪರಮಪೂಜ್ಯ ಜಗದ್ಗುರುಗಳು, ಶ್ರೀ ಜಿ.ಎಲ್. ತ್ರಿಪುರಾಂತಕ, ಶ್ರೀ ಎಸ್.ಪಿ. ಉದಯ ಶಂಕರ್, ಶ್ರೀ ಬಿ. ನಿರಂಜನಮೂರ್ತಿ ಹಾಗೂ ಡಾ. ಬಿ. ಮಂಜುನಾಥ್‌ರವರು



ಮೈಸೂರಿನ ಕಲಾಮಂದಿರದಲ್ಲಿ ಏರ್ಪಡಿಸಿದ್ದ 'ಕಾಯಕ ತಪಸ್ವಿ' ದೃಶ್ಯ-ನಾಟ್ಯ ಸಂಗಮ ಪ್ರದರ್ಶನವನ್ನು ರಾಜೇಂದ್ರ ಶ್ರೀಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಲಾಯಿತು. ಚಿತ್ರದಲ್ಲಿ ಶ್ರೀಮತಿ ರೂಪಾ ರವೀಂದ್ರನ್, ಶ್ರೀ ಎಸ್. ಬಾಲರಾಜ್, ಶ್ರೀ ಎಸ್.ಪಿ. ಮಂಜುನಾಥ್, ಹೊಸಮಠದ ಶ್ರೀಗಳು, ಶ್ರೀ ಜಯರಾಜೇಂದ್ರರು, ಬರಡನಪುರ ಮತ್ತು ಕುಂದೂರು ಮಠದ ಶ್ರೀಗಳು



ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ವತಿಯಿಂದ ಏರ್ಪಡಿಸಿದ್ದ ನ್ಯಾನೋ ಸ್ಯಾಟ್‌ಲೈಟ್ ತಂತ್ರಜ್ಞಾನ ಕುರಿತ ಕಾರ್ಯಾಗಾರವನ್ನು ಇಸ್ರೋದ ಮಾಜಿ ನಿರ್ದೇಶಕರಾದ ಡಾ. ಎಸ್. ರಂಗರಾಜನ್‌ರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ ಡಾ. ಕೆ.ಎಸ್. ಲೋಕೇಶ್, ಡಾ. ಟಿ.ಎನ್. ನಾಗಭೂಷಣ್, ಡಾ. ಶಂಕರಯ್ಯ, ಡಾ. ಸುದರ್ಶನ್ ಪಾಟೀಲ್ ಕುಲಕರ್ಣಿ, ಪ್ರೊ. ಡಿ.ಆರ್. ಪವಿತ್ರ ಮತ್ತು ಪ್ರೊ. ರಮ್ಯಾರವರು

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 4, Issue No. 22 October 2019**



ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ 'ಗ್ಲಿಂಪ್ಸೆಸ್ ಆಫ್ ದಿ ಚೆರಿಷ್ಡ್ ವ್ಯಾಲ್ಯೂಸ್' ಮತ್ತು 'ಸುತ್ತೂರು ಸುರಧೇನು' ಕೃತಿಗಳನ್ನು ಡಾ. ಹಂಪನಾರವರು ಲೋಕಾರ್ಪಣೆಗೊಳಿಸಿದರು. ಚಿತ್ರದಲ್ಲಿ ಶ್ರೀ ಪಿ.ಎಸ್. ಹಿರೇಮಠ, ಡಾ. ಸಿ. ಶಿವಕುಮಾರಸ್ವಾಮಿ, ಶ್ರೀ ಮಲ್ಲಿಕಾರ್ಜುನ ಎಂ. ಕೋರವಾರಕರ್, ಶ್ರೀ ನಿರುಪಾಧೀಶ ಸ್ವಾಮಿಗಳು, ಪರಮಪೂಜ್ಯ ಜಗದ್ಗುರುಗಳು, ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, ಶ್ರೀ ಚಿರಂಜೀವಿ ಸಿಂಗ್, ಡಾ. ಪ್ರಧಾನ್ ಗುರುದತ್ತ, ಡಾ. ಸಿ.ಜಿ. ಬೆಟಸೂರಮಠ, ಪ್ರೊ. ಚಂದ್ರಶೇಖರಯ್ಯನವರು



ಮೈಸೂರಿನ ಸರಸ್ವತಿಪುರಂನ ಜೆಎಸ್ಎಸ್ ಮಹಿಳಾ ಕಾಲೇಜಿನ ಕನ್ನಡ ವಿಭಾಗದಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ಮ. ರಾಮಕೃಷ್ಣ ಅವರು ಸಾಹಿತ್ಯ ಮತ್ತು ಜೀವನ ಮೌಲ್ಯಗಳು ಎಂಬ ವಿಷಯವನ್ನು ಕುರಿತು ಮಾತನಾಡಿದರು. ಚಿತ್ರದಲ್ಲಿ ಡಾ. ಎಸ್.ಪಿ. ಉಮಾದೇವಿ, ಪ್ರೊ. ಕೆ.ವಿ. ಸುರೇಶ್ ಮತ್ತು ಡಾ. ಎಚ್.ಬಿ. ಸುರೇಶ್ ಇದ್ದಾರೆ



ಸುತ್ತೂರು ಜೆಎಸ್ಎಸ್ ಶಾಲೆಯ ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಗೀತ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾದ ಸಂದರ್ಭದಲ್ಲಿ ಮುಖ್ಯಸ್ಥರು ಹಾಗೂ ತರಬೇತಿ ನೀಡಿದ ಶಿಕ್ಷಕರು

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ಟವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು **ಬಿಡಿ ಪ್ರತಿ 10 ರೂ.**